ಶ್ರೀರಾಮ ಪ್ರೌಢಶಾಲೆಯಲ್ಲಿ ವಿಜ್ಞಾನ ರಾಷ್ಟ್ರೀಯ ವಿಜ್ಞಾನ ದಿನಾಚರಣೆ: ಭೂಮಿ, ಚಂದ್ರ ಹಾಗೂ ಗ್ರಹಗಳ ಚಲನೆ ಹಾಗೂ ಚಂದ್ರಗ್ರಹಣ, ಸೂರ್ಯಗ್ರಹಣ ಗಣಿತಶಾಸ್ತ್ರಗಳ ಮೂಲಕ ಹೇಳುವ ಜ್ಯೋತಿಷ್ಯಶಾಸ್ತ್ರ ಗಣಿತ ಮತ್ತು ವಿಜ್ಞಾನಕ್ಕೆ ಸಹಸ್ರಾರು ವರ್ಷಗಳ ಹಿಂದೆ ಭಾರತ ನೀಡಿದ ವಿಶಿಷ್ಟ ಕೊಡುಗೆ ಎಂದು ಶ್ರೀರಾಮ ವಿದ್ಯಾ-ಕೇಂದ್ರದ ಸಂಚಾಲಕ ಡಾ॥ಪ್ರಭಾಕರ ಭಟ್ ಹೇಳಿದರು.



ಅವರು ಶುಕ್ರವಾರ ಕಲ್ಲಡ್ಕದಲ್ಲಿ ಶ್ರೀರಾಮ ಪ್ರೌಢಶಾಲೆ ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಆಶ್ರಯದಲ್ಲಿ ನಡೆದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಭಾರತ ವಿಜ್ಞಾನ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರ. ಪ್ರತಿಯೊಂದು ಮಗುವಿನಲ್ಲಿಯೂ ಒಬ್ಬ ವಿಜ್ಞಾನಿ ಇದ್ದಾನೆ. ಮೂಲ ವಿಜ್ಞಾನಿ ಭಾರತೀಯರ ಜೀವನದ ಒಂದು ಭಾಗವಾಗಿದ್ದು ಎಲ್ಲವನ್ನೂ ತಿಳಿದುಕೊಳ್ಳುವ ಆಸಕ್ತಿ ಮಕ್ಕಳಲ್ಲಿ ಬೆಳೆಸಬೇಕಾಗಿದೆ. ಪ್ರಕೃತಿಯ ರಹಸ್ಯವನ್ನು ಅರಿತುಕೊಳ್ಳುವ ಮೂಲಕ ವೈಜ್ಞಾನಿಕ ಪ್ರಗತಿಯಾಗಬೇಕು ಎಂದರು.

ಇಸ್ರೋ ವಿಜ್ಞಾನಿ, ಸಂಸ್ಕೃತ ಭಾರತ ಕರ್ನಾಟಕದ ಸಂಘಟನಾ ಮಂತ್ರಿ ಬಾಲಮುರಳಿಕೃಷ್ಣ ಕಾರ್ಯಕ್ರಮವನ್ನು ಉದ್ಘಾಟಿಸಿ ಹೊಸಹೊಸ ಸಂಶೋಧನಾ ಕಾರ್ಯದಲ್ಲಿ ವಿದ್ಯಾರ್ಥಿಗಳು ತಮ್ಮನ್ನು ತೊಡಗಿಸಿಕೊಳ್ಳುವ ಮಾರ್ಗದರ್ಶನ ಅಗತ್ಯವಿದೆ. ಭಾರತದ ವಿಜ್ಞಾನಿಗಳ ಸಾಧನೆ ಬಗ್ಗೆ ಮಕ್ಕಳಿಗೆ ತಿಳುವಳಿಕೆ ನೀಡುವ ಮೂಲಕ ಖಗೋಳ ವಿಜ್ಞಾನದ ಪರಿಚಯ ಮಾಡಬೇಕೆಂದರು.



ಬಂಟ್ವಾಳ ಕ್ಷೇತ್ರ ಶಿಕ್ಷಣಾಧಿಕಾರಿ ಶೇಷಶಯನ ಕಾ-ರಿಂಜ, ವಿಜ್ಞಾನ ಪರಿವೀಕ್ಷಣಾಧಿಕಾರಿ ರಾಧಾಕೃಷ್ಣ, ಶಿಕ್ಷಣ ಸಂಯೋಜಕ ರಮಾನಂದ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ವಿಶ್ವನಾಥ ಪ್ರಭು, ಕಾರ್ಯದರ್ಶಿ ಮುತ್ತಪ್ಪ ತುಳಸೀವನ ಉಪಸ್ಥಿತರಿದ್ದರು. ಜಲ ರಾಕೆಟ್ ಉಡಾವಣೆ ಮೂಲಕ ವಿವಿಧ ಪ್ರಯೋಗಗಳನ್ನು ವಿಜ್ಞಾನಿ ಬಾಲಮುರಳಿಕೃಷ್ಣ ಉದ್ಘಾಟಿಸಿದರು. ವಿಜ್ಞಾನದ ವಿವಿಧ ಪ್ರಯೋಗಗಳು, ವಿಜ್ಞಾನಮಾದರಿ, ಗಣಿತ ಮಾದರಿ, ಔಷಧಿ ಸಸ್ಯಗಳು, ಗಣಿತದ ಸವಾಲುಗಳು, ಸರ್.ಸಿ.ವಿ.ರಾಮನ್ ಪರಿಚಯ, ಗಣಕಯಂತ್ರ ಬಿಡಿಭಾಗಗಳ ಪರಿಚಯ ಮತ್ತು ಗಣಕಯಂತ್ರದಲ್ಲಿ ವಿವಿಧ ಸ್ಪರ್ಧೆಗಳನ್ನು ನಡೆಸುವ ಮೂಲಕ ಗಣಕಯಂತ್ರದ ಪರಿಚಯವನ್ನು ನೀಡಿದರು. ಹಾಗೂ ಪ್ರಾಣಿ ಪಕ್ಷಿಗಳ ಪ್ರಾತ್ಯಕ್ಷಿ-ಕೆ ಪರಿಚಯಗಳನ್ನೂ ಮುಂತಾದುವುಗಳನ್ನು 8 ವಿಭಾಗಗಳಲ್ಲಿ ಏರ್ಪಡಿಸಲಾಗಿತ್ತು. ತಾಲೂಕಿನ 26 ಪ್ರಾಥಮಿಕ ಶಾಲೆಗಳಿಂದ ಸಹಸ್ರಾರು ವಿದ್ಯಾರ್ಥಿಗಳು ಭಾಗವಹಿಸಿ ವೀಕ್ಷಿಸಿದರು. ವಿದ್ಯಾರ್ಥಿ-ವಿಜ್ಞಾನಿ ಸಂವಾದ ಕಾರ್ಯಕ್ರಮದಲ್ಲಿ ವಿಜ್ಞಾನಿ ಡಾ॥ಮುರಳಿಕೃಷ್ಣ ಬಾಹ್ಯಾಕಾಶ ವಿಜ್ಞಾನದಲ್ಲಿ ಭಾರತದ ಸಾಧನೆ ತಿಳಿಸಿದರು. ವಿದ್ಯಾಬೋಧಿನಿ ಪ್ರೌಢಶಾಲೆ ಬಾಳಿಲದ ವಿಜ್ಞಾನ ಶಿಕ್ಷಕ ಪಿ.ಎನ್.ಭಟ್ ವಿವಿಧ ಪ್ರಯೋಗಗಳ ಮೂಲಕ ಮಕ್ಕಳಿಗೆ ವೈಜ್ಞಾನಿಕ ಮಾಹಿತಿ ನೀಡಿದರು.





